ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು
ಪಿ.ಸಿ.ಆರ್. ನಂ.64/2026. ಪಿ.ಡಬ್ಲ್ಯೂ:1
ದಿನಾಂಕ 25-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಿರ್ಯಾದುದಾರ ಸ್ವ ಇಚ್ಛಾ ಹೇಳಿಕೆ:-

ನಾನು ನನ್ನ ಮುಖ್ಯ ಸ್ವ ಇಚ್ಛಾ ಹೇಳಿಕೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಾನು ಹೇಳಿ ಬರೆಸಿರುತ್ತೇನೆ ಮತ್ತು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಎಸ್ ಬಿ ಐ ಬ್ಯಾಂಕ್ ಸಂತೆಬೆನ್ನೂರು ಶಾಖೆಯ ತಲಾ ರೂ.3,50,000/- ಮೌಲ್ಯದ ಮೂರು ಚೆಕ್‌ಗಳಾದ ಚೆಕ್ ನಂ.095651, 095653 ಮತ್ತು 095654 ರ ದಿ:30.12.2025, ಚೆಕ್ಕನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-1, 2, 3 ಎಂದು, ಚೆಕ್ಕಿನಲ್ಲಿ ಆರೋಪಿಯ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ), 2(ಎ), 3(ಎ)ಎಂದು ಗುರುತಿಸಲಾಯಿತು.

ದಿ:30.12.2025 ರ ಎಸ್ ಬಿ ಐ ಬ್ಯಾಂಕ್ ಕಡೂರು ಶಾಖೆರವರು ನೀಡಿರುವ ಮೂರು ಹಿಂಬರಹವನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-4, 5, 6 ಎಂದು ಗುರುತಿಸಲಾಯಿತು.

ದಿನಾಂಕ:09.01.2026 ರಂದು ನಾನು ವಕೀಲರ ಮೂಲಕ ಆರೋಪಿಗೆ ನೀಡಿರುವ ತಿಳುವಳಿಕೆ ಪತ್ರದ ಕಚೇರಿ ಪ್ರತಿಯನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-7 ಎಂದು ಗುರುತಿಸಲಾಯಿತು.

ನಿಪಿ-7 ರ ನೋಟೀಸು ಕಳುಹಿಸಿದ ಬಾಬ್ತು ಅಂಚೆ ರಶೀದಿ ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-8 ಎಂದು ಗುರುತಿಸಲಾಯಿತು.

ನೋಟೀಸ್ ಜಾರಿಯಾಗದೇ ವಾಪಸ್ಸು ಬಂದಿರುವ ಅಂಚೆ ಲಕೋಟೆಯನ್ನು ಹಾಜರುಪಡಿಸಿರುತ್ತೇನೆ, ಇದನ್ನು ನಿಪಿ-9 ಎಂದು, ಅದರ ಒಳಗೆ ಇರುವ ನೋಟೀಸಿನ ಪ್ರತಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.